# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಸಿ.ಆರ್.34/2006-07 ದಿನಾಂಕ:20-11-2006

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳವರು ತಮ್ಮ ಶೇಕಡವಾರು ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ:09-12-2006ರಂದು ಸಂಜೆ 4.00ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಹಾಗೂ ಷರತ್ತುಗಳು ಕಛೇರಿಯ ನಾಮಫಲಕದಲ್ಲಿ ಮತ್ತು ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಕಟಿಸಿರುವಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದು.

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ: 04-12-2006
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 06-12-2006
3) ಭರ್ತಿ ಮಾಡಿದ ಟೆಂಡರ್ ಫಾರಂ ಶುಲ್ಕ ರೂ.500/-ಗಳು (ಮಾರಾಟ ಶುಲ್ಕ ಸೇರಿ)
4) ಪ್ರತಿ ಕಾಮಗಾರಿ ಮುಗಿಸಲು ನೀಡಿರುವ ಕಾಲಾವಧಿ : 3ತಿಂಗಳು

**ಎಸ್.ಎಫ್.ಸಿ ಅನುದಾನದಡಿಯಲ್ಲಿ ನಿರ್ವಹಿಸಬೇಕಾಗಿರುವ ಕಾಮಗಾರಿಗಳು:**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ಅರಳುಮಲ್ಲಿಗೆ ಸರ್ಕಲ್ ಹತ್ತಿರ ಮೂತ್ರಾಲಯ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿ | 2,50,000.00 | 6,250.00 |
| 2 | ತಾಲ್ಲೂಕು ಕಛೇರಿ ಹತ್ತಿರ ಮೂತ್ರಾಲಯ ನಿರ್ಮಾಣ ಕಾಮಗಾರಿ | 63,000.00 | 1,575.00 |
| 3 | ಗಾಂಧಿನಗರದ ರಸ್ತೆಯ ಬದಿಯಲ್ಲಿ ಮೂತ್ರಾಲಯ ನಿರ್ಮಾಣ ಕಾಮಗಾರಿ | 45,000.00 | 1,125.00 |
| 4 | ಹಳೇ ಬಸ್ ನಿಲ್ದಾಣದ ಹತ್ತಿರ ಮೂತ್ರಾಲಯ ನಿರ್ಮಾಣ ಕಾಮಗಾರಿ | 1,00,000.00 | 2,500.00 |
| 5 | ಟೌನ್‌ಹಾಲ್ ಬಳಿ ಇರುವ ಶೌಚಾಲಯ ರಿಪೇರಿ ಮತ್ತು ವಿಸ್ತರಿಸುವ ಕಾಮಗಾರಿ | 45,000.00 | 1,125.00 |
| 6 | ಡಿ. ಕ್ರಾಸ್ ಹತ್ತಿರದ ಮೂತ್ರಾಲಯ ರಿಪೇರಿ ಕಾಮಗಾರಿ. | 35,000.00 | 875.00 |
| 7 | ಎಂ.ಎ.ಬಿ.ಎಲ್. ಶಾಲೆಯ ಹತ್ತಿರವಿರುವ ಮೂತ್ರಾಲಯವನ್ನು ತೆರವುಗೊಳಿಸಿ ಹೊಸದಾಗಿ ಮೂತ್ರಾಲಯಗಳನ್ನು ನಿರ್ಮಿಸುವ ಕಾಮಗಾರಿ. | 62,000.00 | 1,550.00 |
| 8 | ಪುರಭವನದ ಈಶಾನ್ಯ ಭಾಗಕ್ಕೆ ಅಂಗಡಿ ಮಳಿಗೆಗಳ ನಿರ್ಮಾಣ ಕಾಮಗಾರಿ. | 12,00,000.00 | 18,000.00 |

**ನಗರಸಭಾ ನಿಧಿಯಲ್ಲಿ ನಿರ್ವಹಿಸಬೇಕಾಗಿರುವ ಕಾಮಗಾರಿಗಳು:**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ನಗರಸಭಾ ಕಛೇರಿಯ ಆಯುಕ್ತರು, ಅಧ್ಯಕ್ಷರು ಮತ್ತು ಸಿಬ್ಬಂದಿ ವರ್ಗದವರಿಗೆ ಕೊಠಡಿಗಳಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿ. | 1,00,000.00 | 2,500.00 |
| 2 | ನಗರಸಭಾ ಕಾರ್ಯಾಲಯದ ಸುತ್ತಮುತ್ತಲು ಚೈನ್‌ಲಿಂಕ್ ಪೆನ್ಸಿಂಗ್ ಅಳವಡಿಸುವ ಕಾಮಗಾರಿ. | 6,00,000.00 | 12,000.00 |

**ಶೇ.18ರ ನಿಧಿಯಡಿಯಲ್ಲಿ ನಿರ್ವಹಿಸಬೇಕಾಗಿರುವ ಕಾಮಗಾರಿಗಳು:**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | 22ನೇ ವಾರ್ಡ್‌ನಲ್ಲಿ ಸಮುದಾಯ ಭವನ/ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ | 2,00,000.00 | 5,000.00 |
| 2 | 12ನೇ ವಾರ್ಡ್‌ನಲ್ಲಿ ಸಮುದಾಯ ಭವನ/ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ | 2,00,000.00 | 5,000.00 |
| 3 | 5ನೇ ವಾರ್ಡ್‌ನಲ್ಲಿ ಅಂಗನವಾಡಿ ಕಟ್ಟಡ ಅಭಿವೃದ್ಧಿಗಾಗಿ | 80,000.00 | 2,000.00 |
| 4 | ವಾರ್ಡ್ ನಂ.30ರ ಕಛೇರಿಪಾಳ್ಯದ ಪರಿಶಿಷ್ಟ ಜನಾಂಗದ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ ಕೆಲಸಕ್ಕಾಗಿ | 1,00,000.00 | 2,500.00 |
| 5 | ನಗರದಲ್ಲಿನ ಸಮುದಾಯ ಭವನಗಳ ದುರಸ್ಥಿಗಾಗಿ/ಸುಣ್ಣ ಬಣ್ಣ ಬಳಿಯುವುದಕ್ಕಾಗಿ | 1,00,000.00 | 2,500.00 |

-2-

**<u>ಷರತ್ತುಗಳು ಮೇಲಿನ ಕಾಮಗಾರಿಗಳಗೆ ಅನ್ವಯಿಸುವಂತೆ:</u>**

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಕಟ್ಟುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

2) ಪಿ.ಡಬ್ಲ್ಯೂ.ಡಿ 65(ಎ) ಮತ್ತು 66ರ ಷರತ್ತುಗಳನ್ನು ಪಾಲಿಸತಕ್ಕದ್ದು.

3) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭ, ಪ್ರಗತಿ, ಮುಕ್ತಾಯದ ಹಂತದ ಪೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,

4) ಟೆಂಡರ್ ಅನುಮೋದಿತ ಗುತ್ತಿಗೆದಾರರು ಕರಾರು ಪತ್ರ ಬರೆದುಕೊಟ್ಟ ಮೂರು ದಿನಗಳ ಒಳಗಾಗಿ ಕಾರ್ಯಾದೇಶವನ್ನು ಪಡೆಯುವುದು. ಮತ್ತು ಕಾರ್ಯಾದೇಶವನ್ನು ನೀಡಿದ ದಿನಾಂಕವೇ ಕಾಮಗಾರಿಯ ಹಸ್ತಾಂತರಿಸಿದ ದಿನಾಂಕವೆಂದು ತಿಳಿಯುವುದು.

5) ಎಸ್.ಆರ್. ದರಕ್ಕಿಂತ ಕಡಿಮೆ ದರವನ್ನು ನಮೂದಿಸುವವರು ವ್ಯತ್ಯಾಸದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಡಿ.ಡಿ.ಯನ್ನು ಪೌರಾಯುಕ್ತರವರ ಹೆಸರಿನಲ್ಲಿ ಭರ್ತಿ ಮಾಡಿದ ಟೆಂಡರ್ ಫಾರಂಗಳ ಜೊತೆ ಸಲ್ಲಿಸುವುದು.

6) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

7) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

| | | | |
|---|---|---|---|
| ಸಹಿ:- | ಸಹಿ:- | ಸಹಿ:- | ಸಹಿ:- |
| (ಶಾಂತಮ್ಮ) | (ವಿ.ರಾಜಪ್ಪ) | (ಸು.ನರಸಿಂಹಮೂರ್ತಿ) | (ಚಿಕ್ಕಣ್ಣ) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಸ್ಥಾ.ಸ.ಅಧ್ಯಕ್ಷರು, | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. |